(ಇಂದು ದಿನಾಂಕಃ 06-01-2023 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಭೋದಿಸಲಾಯಿತು)

**<u>ಪಾಟೀ ಸವಾಲು ಶ್ರೀ ವಿ.ವಿ.ಸಿ ವಕೀಲರಿಂದಃ</u>**

ಮೃತ ಅಮರ ನನ್ನ ಮಗ. ಅಪಘಾತ ಮದ್ಯರಾತ್ರಿ 12.00 ನಂತರ ಆಗಿರುತ್ತದೆ. ಪೆಟ್ರೋಲ ಪಂಪ ಬಿಡ್ಜ ಹತ್ತಿರ ಆಗಿರುತ್ತದೆ. ಅಪಘಾತ ದಿನ ನನ್ನ ಮಗ ಚಂದಾಪುರಕ್ಕೆ ಹೊಗಿ ವಾಪಸ ಬರುತ್ತಿದ್ದನು. ನನ್ನ ಮಗನ ಜೊತೆ ರಾಜು ಎಂಬ ಅವನ ಸ್ನೆಹಿತ ಇದ್ದ. ಗಾಡಿಯನ್ನು ನನ್ನ ಮಗ ನಡೆಸುತ್ತಿದ್ದ. ನನ್ನ ಮಗನ ಚಾಲನಾ ಪರವಾನಿಗೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ನನ್ನ ಮಗ ಯಾವ ಆರ್.ಟಿ.ಒ. ಕಚೇರಿಯಿಂದ ನಾನು ಚಾಲನಾ ಪರವಾನಿಗೆ ಪಡೆದಿದ್ದ ಎಂದು ನನಗೆ ಗೊತ್ತಿಲ್ಲ ಸಾಕ್ಷಿ ಮುಂದುವರೆದು ನಾನು ಶಾಲೆ ಕಲಿತಿಲ್ಲ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನನ್ನ ಮಗ ಶಾಲಾ ವಾಹನಾ ಚಾಲಕನಾಗಿ ಕೆಲಸಮಾಡುತ್ತಿದ ಎಂದರೆ ಸರಿ. ನನ್ನ ಮಗನ ಚಾಲನಾ ಪರವಾನಿಗೆಯನ್ನು ನ್ಯಾಯಾಲಯ ಕೇಳಿದರೆ ಸಲ್ಲಿಸುತ್ತೇನೆ. ನನ್ನ ಮಗನ ಅಪಘಾತ ಆದ ನಂತರ ನಾನು ಹಾಗೂ ನನ್ನ ಅಳಿಯ ಕೊಟ್ಟಿರುತ್ತೇವೆ. ದೂರಿನಲ್ಲಿ ಅಂದರೆ ನಿ.ಪಿ-2 ರಲ್ಲಿ ಬರೆದಿರುವ ಎಲ್ಲ ವಿಷಯಗಳು ಸರಿ ಇರುತ್ತವೆ. ದೂರಿನಲ್ಲಿ ಎನು ಬರೆದಿದೆ ಎಂದರೆ ಸಾಕ್ಷಿ ಲಾರಿ ಬಂದು ನನ್ನ ಮಗನಿಗೆ ಡಿಕ್ಕಿ ಪಡಿಸಿರುತ್ತದೆ ಎಂದು ಹೇಳಿ ಬರೆಸಿರುತ್ತೇವೆ. ನಿ.ಪಿ-2 ರಲ್ಲಿ ರುವ ಸಹಿ ನನ್ನ ಸಹಿ ಇರುತ್ತದೆ. ನಾನು ನನ್ನ ದೂರಿನಲ್ಲಿ ಯಾವುದೇ ವಾಹನ ಡಿಕ್ಕಿ ಪಡಿಸಿ ಅಪಘಾತ ಪಡಿಸಿರುತ್ತದೆ ಎಂದು

ಬರೆಸಿರುತ್ತೇನೆ ಎಂದರೆ ಸಾಕ್ಷಿಯು ನನಗೆ ಓದಲು ಬರುವುದಿಲ್ಲ ಲಾರಿ ಡಿಕ್ಕಿ ಪಡಿಸಿರುತ್ತದೆ ಎಂದು ಬರೆಸಿರುತ್ತೇನೆ ಎಂದು ಹೇಳುತ್ತಾರೆ. ನಿ.ಪಿ-2 ರಲ್ಲಿ ಲಾರಿ ನೊಂದಣಿ ಸಂಖ್ಯೆ ಬರೆಸಿಲ್ಲ ಎಂದರೆ ಸಾಕ್ಷಿಯು ಡಿಕ್ಕಿ ಪಡಿಸಿರುತ್ತದೆ ಎಂದು ಬರೆಸಿರುತ್ತೇನೆ ನಂತರ ವಸಂತರವರು ಹೇಳಿದ ಮೇರೆಗೆ ಲಾರಿ ಸಂಖ್ಯೆಯನ್ನು ಬರೆಸಿರುತ್ತೇನೆ. ವಸಂತರವರು ಫೋನ ಮಾಡಿ ಹೇಳಿದ ನಂತರ ನಾನು ಆಸ್ಪತ್ರೆಗೆ ಹೋಗಿ ನನ್ನ ಮಗನ ಶವವನ್ನು ನೋಡಿರುತ್ತೇನೆ ಎಂದು ಬರೆಸಿರುತ್ತೇನೆ ಎಂದರೆ ಸರಿ.

ಅಪಘಾತದಲ್ಲಿ ನನ್ನ ಮಗನ ಸ್ನೆಹಿತ ರಾಜುಕೂಡ ತೀರಿಕೊಂಡಿರುತ್ತಾನೆ ಎಂದರೆ ಸರಿ. ಅಪಘಾತ ಆದ ನಂತರ ನಾನು ರಾಜುರವರನ್ನು ಬೇಟಿಯಾಗಿದ್ದು, ಅಪಘಾತ ಆದ 15 ದಿನಗಳ ನಂತರ ರಾಜು ತೀರಿಕೊಂಡಿರುತ್ತಾನೆ. ಪೊಲಿಸರು ರಾಜುರವರ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೊ ಇಲ್ಲವೊ ನನಗೆ ಗೊತ್ತಿಲ್ಲ. ಇದೆ ಲಾರಿಯಿಂದ ಅಪಘಾತಆಗಿದೇ ಎಂದು ನಾನು ಪೊಲೀಸರಿಗೆ ಹೇಳಿಕೆ ಕೊಟ್ಟಿರುತ್ತೇನೆ ಆ ಹೇಳಿಕೆಯನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಆ ಹೇಳಿಕೆ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸಾಕ್ಷಿ ನಾನು ಕೊಟ್ಟಿರುತ್ತೇನೆ ಎಂದು ಹೇಳುತ್ತಾರೆ. ನಾನು ದೂರು ಕೊಟ್ಟು 2 ತಿಂಗಳ ನಂತರ ನನ್ನ ಹೇಳಿಕೆ ಕೊಟ್ಟಿರುತ್ತೇನೆ. ಹೇಳಿಕೆ ಕೊಡಲು ಪೊಲೀಸ ಠಾಣೆಗೆ ನಾನು ಮತ್ತು ನನ್ನ ಅಳಿಯ ಹೊಗಿದ್ದೇವು. ನಾನು ಮತ್ತು ನನ್ನ ಅಳಿಯ ಅಪಘಾತವನ್ನು ಕಣ್ಣಾರೆ ನೋಡಿಲ್ಲ. ಇದೇ ಲಾರಿ ಅಪಘಾತಪಡಿಸಿದೆ ಎಂದು ನಮಗೆ ಹೇಗೆ ಗೊತ್ತಾಯಿತು ಎಂದರೆ ಸಾಕ್ಷಿ ವಸಂತ ರವರು ಹೇಳಿರುತ್ತಾರೆ. ಆ ದಿನ ನನ್ನ ಜೊತೆ ವಸಂತ ರವರು ಬಂದಿದ್ದರು. ವಸಂತ ಚಿಂಚೊಳಿಯಲ್ಲಿ ವಾಸವಾಗಿದ್ದಾರೆ. ವಸಂತರವರ ಹೇಳಿಕೆಯನ್ನು ಪೊಲೀಸರು

ತೆಗೆದುಕೊಂಡಿರುತ್ತಾರಾ ಎಂದರೆ ನನಗೆ ಗೊತ್ತಿಲ್ಲ. ನಾವು ಮೊದಲು ದೂರು ಕೊಡಲು ಹೊದಾಗ ವಸಂತರವರು ನಮ್ಮ ಜೊತೆ ಬಂದಿರಲಿಲ್ಲ. ವಸಂತರವರ ಜೊತೆ ಹೋಗಿ ನಾನು ಕೊಟ್ಟ ದೂರ ಪ್ರತಿಯನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಈ ಬಗ್ಗೆ ನಾನು ದಾಖಲೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ.

ಅಪಘಾತವು ಮಧ್ಯ ರಸ್ತೆಯ ಮೇಲೆ ಆಗಿದೆ ಎಂದರೆ ಸಾಕ್ಷಿ ನಾನು ಅಪಘಾತ ಆದ ಬಗ್ಗೆ ನಾನು ನೋಡಿಲ್ಲ. ಅಪಘಾತ ಸ್ಥಳವನ್ನು ನಾನು ನೋಡಿಲ್ಲ. ಪೊಲೀಸರು ಸಲ್ಲಿಸಿದ ನಕ್ಷೆಯ ಪ್ರಕಾರ ರಸ್ತೆಯ ಮಧ್ಯ ಅಪಘಾತ ಆಗಿದೆ ಎಂದರೆ ಸಾಕ್ಷಿ ನಾನು ನೋಡಿಲ್ಲ, ವಸಂತರವರು ನೋಡಿರುತ್ತಾರೆ ಎಂದು ಹೇಳುತ್ತಾರೆ. ಅಪಘಾತ ಸ್ಥಳದಲ್ಲಿ ವಸಂತರವನ್ನು ಹೊರತುಪಡಿಸಿ ಬೇರೆ ಯಾರು ಇದ್ದರು ಎಂದು ನನಗೆ ಗೊತ್ತಿಲ್ಲ, ಸಾಕ್ಷಿ ಮುಂದುವರೆದು ಅಪಘಾತದ ಬಗ್ಗೆ ನನಗೆ ವಸಂತ ರವರು ಹೇಳಿರುತ್ತಾರೆ. ನನ್ನ ಮಗ ಮಾತೃ ಮಂದಿರ ಪ್ರೌಢ ಶಾಲೆಯಲ್ಲಿ 6 ವರ್ಷಗಳಿಂದ ಕೆಲಸ ಮಾಡುತ್ತಿದ್ದ. ನನ್ನ ಮಗನಿಗೆ ತಿಂಗಳಿಗೆ 16 ಸಾವಿರ ಸಂಬಳ ಇತ್ತು. ಅವನಿಗೆ ಸಂಬಂಳ ನಗದು ರೂಪಲ್ಲಿ ಕೊಡುತ್ತಿದ್ದರು. ನಿ.ಪಿ-11 ರಲ್ಲಿ ನನ್ನ ಮಗನಿಗೆ ನಗದು ರೂಪದಲ್ಲಿ ಸಂಬಳ ಕೊಡುತ್ತಿದ್ದರು ಹಾಗೂ ಅವನು ಕಳೆದ 6 ವರ್ಷಗಳಿಂದ ಅಲ್ಲಿ ಕೆಲಸ ಮಾಡುತ್ತಿದ ಎಂದು ಬರೆದಿಲ್ಲ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಪಡೆಯುವ ಉದ್ದೇಶದಿಂದ ನಿ.ಪಿ-11 ರಲ್ಲಿ ಸುಳ್ಳು ಸೃಷ್ಟಿಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗನಿಗೆ ತಿಂಗಳಿಗೆ 16 ಸಾವಿರ ಸಂಬಳ ಬರುತ್ತಿತ್ತು ಎಂದು ತೋರಿಸಲು ನಿ.ಪಿ-11 ನ್ನು ಹೊರತುಪಡಿಸಿ ನಾನು ಬೇರೆ ದಾಖಲೆ ಸಲ್ಲಿಸಿಲ್ಲ ಎಂದರೆ ಸಾಕ್ಷಿ ಶಾಲೆ ನೀಡಿದ ಪ್ರಮಾಣ ಪತ್ರ ನೀಡಿರುತ್ತೇನೆ ಎಂದು ಹೇಳುತ್ತಾರೆ. ಅಪಘಾತ ಆದ ಸಮಯದಲ್ಲಿ

ನನ್ನ ಮಗನಿಗೆ 25-26 ವಯಸಿತ್ತು. ನನ್ನ ಮಗನ ವಯಸ್ಸು 25-26 ಇತ್ತು ಎಂದು ತೋರಿಸಲು ನನ್ನ ಮಗನ ಆಧಾರ ಕಾರ್ಡ ಸಲ್ಲಿಸಿರುತ್ತೇನೆ. ನನ್ನ ಮಗನ ವಯಸ್ಸು 25-26 ಕ್ಕಿಂತ ಹೆಚ್ಚಿನ ವಾಯಸ್ಸು ಆಗಿತ್ತು ಆದ್ದರಿಂದ ಅವನ ಆಧಾರ ಕಾರ್ಡನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ನಾನು ಕೂಲಿ ಕೆಲಸ ಮಾಡುತ್ತೇನೆ. ನಾನು ಹಾಗೂ ನನ್ನ ಮಗಳು ನನ್ನ ಮಗನ ಆದಾಯದ ಮೇಲೆ ಅವಲಂಬಿತರಾಗಿಲಿಲ್ಲ ಎಂದರೆ ಸರಿಯಲ್ಲ. ನನ್ನ ಮಗನ ಮದುವೆಯಾಗಿರಲಿಲ್ಲ. ನಾನು ಕೇಳುತ್ತಿರುವ ಪರಿಹಾರ ಹಣಕ್ಕೆ ಯಾವುದೇ ಆಧಾರ ಇಲ್ಲ ಎಂದರೆ ಸರಿಯಲ್ಲ. ಸದರಿ ಅಪಘಾತ ನಾನು ಹೇಳುತ್ತಿರುವ ಲಾರಿಯಿಂದ ಆಗಿರಲಿಲ್ಲ, ಪರಿಹಾರ ಪಡೆಯುವ ಉದ್ದೇಶದಿಂದ 71 ದಿನಗಳ ನಂತರ ನಾನು ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮಗನಿಗೆ ಇದೇ ಲಾರಿಯಿಂದ ನನ್ನ ಮಗನಿಗೆ ಅಪಘಾತ ಆಗಿದೆ ಎಂದು ತೋರಿಸಲು ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

Sd/-
ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ, ಚಿಂಚೋಳಿ.